(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಡದೆ ಕಲಾಪ ಮುಂದುವರೆಸುತ್ತಿರುವುದನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನೂ ತಾವು ರೂಲಿಂಗ್ ಈಗಲೇ ಕೊಡದಿರುವುದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇನೆ.

ಅಧ್ಯಕ್ಷರು : ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತೆ ಮತ್ತೆ chair ಅನ್ನು defy ಮಾಡಬೇಡಿ. ತಾವು ಮತ್ತೆ ಮತ್ತೆ chair ಅನ್ನ defy ಮಾಡುವುದು ಸರಿಯಲ್ಲ. ನನ್ನ ರೂಲಿಂಗ್ ಅನ್ನು ನಾನು reserve ಮಾಡಿದ್ದೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಸಂತಾಪ ಸೂಚಕ ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್, ಶ್ರೀ ಜಿ.ವಿ. ಶ್ರೀರಾಮರೆಡ್ಡಿ, ಶ್ರೀ ಎಸ್. ರಾಜೇಂದ್ರನ್ ಮತ್ತು ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರು ಸಭಾತ್ಯಾಗ ಮಾಡಿದರು)

2. ಸಂತಾಪ ಸೂಚನೆ

ವಿಷಯ: ಭಾರತದ ಮಾಜಿ ರಾಷ್ಟ್ರಪತಿಯವರಾದ ಶ್ರೀ ಕೆ.ಆರ್. ನಾರಾಯಣನ್, ಮತ್ತಿತರ ಗಣ್ಯರ ನಿಧನ.

ಅಧ್ಯಕ್ಷರು : ಭಾರತದ ಮಾಜಿ ರಾಷ್ಟ್ರಪತಿಯವರಾದ ಶ್ರೀ ಕೆ.ಆರ್. ನಾರಾಯಣನ್, ಕೇಂದ್ರದ ಹಾಲಿ ಸಚಿವರಾಗಿದ್ದ ಶ್ರೀ ಪಿ.ಎಂ. ಸಯೀದ್, ರಾಜ್ಯದ ಮಾಜಿ ಸಚಿವರಾಗಿದ್ದ ಶ್ರೀ ಬಿ.ಎಸ್. ಪಾಟೀಲ್, ಶ್ರೀ ಪಿ.ಪಿ. ಹೆಗರೆ, ಮಾಜಿ ಸಂಸತ್ ಸದಸ್ಯರಾಗಿದ್ದ ಶ್ರೀ ವಿ. ಕೃಷ್ಣರಾವ್, ವಿಧಾನಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಜಿ. ನಾರಾಯಣ ಕುಮಾರ್, ಶ್ರೀ ಶಂಕರ್ ಎಸ್. ಕರನಿಂಗ್, ಶ್ರೀ ಬಾಬುರಾವ್ ಅಣ್ಣಪ್ಪ ಬೋಳಶೆಟ್ಟಿ, ಶ್ರೀ ಕೆ.ಎಂ. ಪುಟ್ಟು, ಶ್ರೀ ಯು.ಕೆ. ಶಾಮಣ್ಣ, ಶ್ರೀ ಭೀಮನೇನಿ ಕೊಂಡಯ್ಯ, ಶ್ರೀ ಸಿ.ವಿ. ಪುಡಕಲಕಟ್ಟಿ, ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ, ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಎಸ್. ಚನ್ನಬಸವಯ್ಯ, ಡಾ: ಎಂ.ಆರ್. ತಂಗಾ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಡಾ: ಹೆಚ್.ಎಲ್. ನಾಗೇಗೌಡ, ಡಾ: ಎಂ.ಸಿ. ಮೋದಿ, ಗಣ್ಯ ವ್ಯಕ್ತಿಗಳಾದ ಶ್ರೀಮತಿ ಶಾಂತಾದೇವಿ ಮಾಳವಾಡ, ಡಾ: ಎಲ್.ಆರ್. ಹೆಗಡೆ, ಡಾ: ಡಿ.ಎಂ. ನಂಜುಂಡಪ್ಪ, ಶ್ರೀ ಎಸ್.ಜಿ. ಮೈಸೂರುಮಠ, ಶ್ರೀ ಕೆ. ರಾಜಾರಾವ್, ಶ್ರೀ ವಜ್ರಮುನಿ ಹಾಗೂ ಶ್ರೀ ಸಿ.ಜಿ. ಕೃಷ್ಣಸ್ವಾಮಿ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಕೆ.ಆರ್. ನಾರಾಯಣನ್

ಭಾರತದ ಮಾಜಿ ರಾಷ್ಟ್ರಪತಿಗಳಾದ ಶ್ರೀ ಕೆ.ಆರ್. ನಾರಾಯಣನ್ ಅವರು 1920ರ ಅಕ್ಟೋಬರ್ 27ರಂದು ಕೇರಳದ ಕೊಟ್ಟಾಯಂ ಜಿಲ್ಲೆಯ ಉಳವೂರು ಗ್ರಾಮದಲ್ಲಿ ಜನಿಸಿದ್ದು, ಉಪನ್ಯಾಸಕರಾಗಿ ವೃತ್ತಿಯನ್ನು ಪ್ರಾರಂಭಿಸಿ ನಂತರ ಹಲವಾರು ಪತ್ರಿಕೆಗಳ ವರದಿಗಾರರಾಗಿದ್ದರು. 1949ರಲ್ಲಿ ಶ್ರೀ ನಾರಾಯಣನ್ ಅವರು ವಿದೇಶಾಂಗ ಸೇವೆಗೆ ಸೇರಿ ಹಲವಾರು ದೇಶಗಳಲ್ಲಿ ರಾಜತಾಂತ್ರಿಕರಾಗಿ ಕಾರ್ಯನಿರ್ವಹಿಸಿದ್ದರು. ನಿವೃತ್ತಿಯ ನಂತರ ಜವಹರಲಾಲ್ ನೆಹರು ವಿಶ್ವವಿದ್ಯಾನಿಲಯದ ಕುಲಪತಿಯಾಗಿಯೂ ಕೆಲಸ ನಿರ್ವಹಿಸಿ ನಂತರ ಸಕ್ರಿಯ ರಾಜಕಾರಣದಲ್ಲಿ